ವಾರದ ಪತ್ರ

## ಪಾತ್ರಕ್ಕೆ ತಕ್ಕಂತೆ ವೇಷಭೂಷಣ ಸೂಕ್ತ

ಝೀ ಕನ್ನಡದ 'ಅಮೃತಧಾರೆ' ವೀಕ್ಷಕರ ಮನ ಸೆಳೆದು ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಇತ್ತೀಚಿನ ಕಂತಿನಲ್ಲಿ ಕಥಾನಾಯಕಿ ಭೂಮಿಕಾ ತನ್ನ ಸಿರಿವಂತ ಗಂಡ ಗೌತಮನಿಗೆ ಪಾರ್ಟಿ ಮತ್ತು ಉಡುಗೊರೆ ಕೊಡಿಸುವುದಾಗಿ ಹೊರಗೆ ಕರೆದೊಯ್ಯುತ್ತಾಳೆ. ಬಡತನದ ಪರಿಚಯ, ಚೌಕಾಶಿ ಮುಂತಾದವುಗಳ ಪರಿಚಯವೇ ಇಲ್ಲದ ಗೌತಮನಿಗೆ ಅವು ಒಂದು ವಿಶೇಷ ಅನುಭವವನ್ನು ನೀಡುತ್ತವೆ. ಸಿರಿವಂತರಿಗೆ ಇಂತಹವುಗಳ ಅರಿವಿರಬೇಕು ಎಂಬುದು ನಿಜ.

ಅದೇ ಸಂಜೆ ತಿಂಡಿ ತಿನ್ನಲು ಒಂದು ಬೀದಿ ಬದಿಯ ಗಾಡಿಯ ಬಳಿ ಇಬ್ಬರೂ ಹೋಗುತ್ತಾರೆ. ಆ ವ್ಯಾಪಾರಿ ಇವರನ್ನು ಗುರುತಿಸುತ್ತಾಳೆ ಮತ್ತು ಖುಷಿ ಪಡುತ್ತಾಳೆ. ಆದರೆ, ಆ ವ್ಯಾಪಾರಿ ಹೆಣ್ಣುಮಗಳು ಸೆರಗಿಗೂ ನೆರಿಗೆ ಬರುವಂತೆ ಅಚ್ಚುಕಟ್ಟಾಗಿ ಸೀರೆ ಉಟ್ಟು, ಕ್ಲಿಪ್ ಹಾಕಿ ಚೆಂದದ ಮೇಕಪ್ ಮಾಡಿಕೊಂಡು ಯಾವುದೋ ಮದುವೆಗೆ ಹೋಗುವ ರೀತಿ ನಿಂತಿರುತ್ತಾಳೆ. ಬೀದಿ ಬದಿಯ ವ್ಯಾಪಾರಿ ಆ ರೀತಿ ಇರಲು ಸಾಧ್ಯವಿಲ್ಲ. ಪಾತ್ರಕ್ಕೆ ತಕ್ಕಂತೆ ವೇಷಭೂಷಣಗಳು ಇರುವುದು ಸೂಕ್ತ. ಇಲ್ಲವಾದಲ್ಲಿ ಅಸಹಜತೆ ಕಾಣುತ್ತದೆ.

—ಪತ್ತಂಗಿ ಎಸ್. ಮುರಳಿ, ಬೆಂಗಳೂರು

## ಧಾರಾವಾಹಿಗೆ ಭವಿಷ್ಯವಾಣಿ ಊರುಗೋಲು

ಆಕೆ ಅಥವಾ ಆತ ತುಂಬ ಚಿಂತೆಯಲ್ಲಿರುತ್ತಾರೆ. ಇದ್ದಕ್ಕಿದಂತೆ ಅದೆಲ್ಲಿಂದಲೋ ಒಬ್ಬ ಸನ್ಯಾಸಿ ಪ್ರತ್ಯಕ್ಷನಾಗಿ ಅವರ ಮನೆಯ ಮುಂದಿನ ಆಗುಹೋಗುಗಳನ್ನೆಲ್ಲ ಹೇಳಲು ಶುರುಮಾಡುತ್ತಾನೆ. ಏನಾದರೂ ಪ್ರಶ್ನೆ ಕೇಳಿದರೆ ಅದಕ್ಕೆ ಏನೇನೋ ಗೊಂದಲದ ಉತ್ತರಗಳನ್ನು ಕೊಟ್ಟು, 'ಮುಂದಿನದನ್ನು ನೀವೇ ಹುಡುಕಿಕೊಳ್ಳಿ' ಅಂತ ಹೇಳಿ ಹೊರಟುಹೋಗುತ್ತಾನೆ. ಅದೆಲ್ಲಿಂದ ಬರುತ್ತಾರೋ? ಅದೆಲ್ಲಿಗೆ ಹೋಗುತ್ತಾರೋ? ಈಗೀಗ ಧಾರಾವಾಹಿಗಳಲ್ಲಿ ಹೀಗೆ ಮುಂದಿನ ಆಗುಹೋಗುಗಳನ್ನು ಹೇಳುವವರು ಜಾಸ್ತಿ ಆಗುತ್ತಿದ್ದಾರೆ. ಅವರು ಏನನ್ನು ಹೇಳಲು ಬರುತ್ತಾರೆ ಎನ್ನುವುದು ವೀಕ್ಷಕರಿಗೆ ಅರ್ಥವೇ ಆಗಲ್ಲ.

—ಜಯಂತಿ ಶಾಸ್ತ್ರಿ, ಮೈಸೂರು



## ಮಂದಿರದಲ್ಲಿ ತುಂಡು ಬಟ್ಟೆ ಬೇಡ

ಈಗೀಗ ಹಿಂದೂ ದೇವಾಲಯಗಳಲ್ಲಿ ಡ್ರೆಸ್ ಕೋಡ್ ಬಗ್ಗೆ ನಿಯಮಗಳನ್ನು ಆಡಳಿತ ಮಂಡಳಿಗಳು ರೂಪಿಸುತ್ತಿವೆ. ಈ ಬಗ್ಗೆ ಭಕ್ತಾದಿಗಳಿಗೆ ತಿಳಿವಳಿಕೆಯನ್ನು ನೀಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮಿ'ಯಲ್ಲಿ ಪಂಚತಾರಾ ಹೋಟೆಲ್‌ನಲ್ಲಿ ಭಾಗ್ಯ ಜೊತೆ ಕೆಲಸ ಮಾಡುವ ಹಿತಾ, ಭಾಗ್ಯಳ ಪತಿ ತಾಂಡವ್ ಸೂರ್ಯವಂಶಿ ಅವರ ಸಹೋದ್ಯೋಗಿ ಜೊತೆ ಗುಟ್ಟಾಗಿ ಮದುವೆ ಆಗಲು ನಿರ್ಧರಿಸಿರುವುದನ್ನು ಭಾಗ್ಯಳಿಗೆ ತಿಳಿಸಲು ದೇವಸ್ಥಾನಕ್ಕೆ ಮೊಣಕಾಲುವರೆಗಿನ ಬಟ್ಟೆಯಲ್ಲಿ ಬರುವ ದೃಶ್ಯ ಕಂಡು ಬೇಸರವಾಯಿತು.

—ಅನುರಾಧ ಟಿ., ದಾವಣಗೆರೆ

## ವಿವಾಹದಲ್ಲಿ ಅಷ್ಟಪದಿ!

ಝೀ ವಾಹಿನಿಯ 'ಸೀತಾರಾಮ'ದಲ್ಲಿ ಕೊನೆಗೂ ಸೀತಾ–ಶ್ರೀರಾಮ್ ದೇಸಾಯಿಯವರ ವಿವಾಹ ಸಂಪನ್ನವಾಯಿತು. ಸಪ್ತಪದಿ ತುಳಿದ ನಂತರ ರಾಮ್ ಪುರೋಹಿತರಲ್ಲಿ ಇನ್ನೊಂದು ಸುತ್ತು ಪ್ರದಕ್ಷಿಣೆ ಹಾಕಲು ಅನುಮತಿ ಕೇಳಿ ಅಷ್ಟಪದಿ ತುಳಿಯುತ್ತಾನೆ. ವಿಶೇಷವೆಂದರೆ, ಎಂಟನೇ ಪಾದದಲ್ಲಿ ಸೀತಾಳ ಮಗಳು ಸಿಹಿಯನ್ನು ತನ್ನ ಮಗಳೆಂದು ಸಂಕಲ್ಪ ಮಾಡಿ ಬಂಧುಮಿತ್ರರ ಸಮ್ಮುಖದಲ್ಲಿ ಆಕೆಗೆ ತಾನು ಅಪ್ಪನೆಂದು ಅಧಿಕೃತವಾಗಿ ಘೋಷಿಸುತ್ತಾನೆ.

ಸಪ್ತಪದಿಯ ಬದಲು ಅಷ್ಟಪದಿ ತುಳಿಯುವುದು ಸಂಪ್ರದಾಯವಾದಿಗಳ ದೃಷ್ಟಿಯಲ್ಲಿ ಅಸಮಂಜಸವೆನಿಸಿದರೂ ಸಮಾಜದ ಹಿತದೃಷ್ಟಿಯಿಂದ ಸರಿಯೆನಿಸುತ್ತದೆ. ಡಿಸೆಂಬರ್ 31ರ ರಾತ್ರಿ ಹೊಸವರ್ಷದ ಸಂಕಲ್ಪವೆಂದು ಕಾಟಾಚಾರಕ್ಕೆ ಹೇಳಿಕೊಳ್ಳುವ ಬದಲು ಈ ರೀತಿ ಅಗ್ನಿಸಾಕ್ಷಿಯಾಗಿ ಪ್ರಾಯೋಗಿಕ ಸಂಕಲ್ಪಗೈಯುವುದು ನಿಜಕ್ಕೂ ಸಾಮಾಜಿಕ ಹಾಗೂ ಕೌಟುಂಬಿಕ ಹಿತದೃಷ್ಟಿಯಿಂದ ಸ್ವಾಗತಾರ್ಹ.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ರಾಧಾಳನ್ನು ಸೋಲಿಸದಿರಲು ನಿರ್ದೇಶಕರ ಹಟ

ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು' ಧಾರಾವಾಹಿ ಸೂತ್ರವಿಲ್ಲದ ಪಟದಂತೆ ಎತ್ತೆತ್ತಲೋ ಸಾಗುತ್ತಿದೆ. ಚಿತ್ರ ವಿಚಿತ್ರವಾದ ಸನ್ನಿವೇಶಗಳಿಂದ ನೋಡುಗರಿಗೆ ಬೇಸರವೆನಿಸಿದೆ. ಇದರಲ್ಲಿ ರಾಧಾ ಪಾತ್ರ ಎಲ್ಲೆ ಇಲ್ಲದಂತೆ ಸಾಗುತ್ತಿದೆ. ಬಂಗಾರಮ್ಮನಂತಹ ಅತ್ತೆ ಮನೆಯಲ್ಲಿ ಇದ್ದರೂ ಆಕೆಯ ಪ್ರೀತಿಗೆ ಪಾತ್ರವಾದ ಸೊಸೆ ಸ್ನೇಹಾಳನ್ನು ಟಾರ್ಗೆಟ್ ಮಾಡುವುದು ನಿರಂತರವಾಗಿ ನಡೆದಿದೆ. ಆಕೆಗೆ ಮುಖಭಂಗ ಮಾಡುವುದು ಸರಿಯಲ್ಲ. ನಿರ್ದೇಶಕರು ಮಾತ್ರ ಜಿದ್ದಿಗೆ ಬಿದ್ದವರಂತೆ ರಾಧಾಳನ್ನು ಸೋಲಿಸಬಾರದೆಂದೇ ಹಟ ಹಿಡಿದಂತಿದೆ. ಇದನ್ನು ಬೇಗ ಮುಗಿಸಿದರೆ ಪ್ರೇಕ್ಷಕರಿಗೆ ಒಳ್ಳೆಯದು.

—ಡಿ. ಅಮೀನಾ ರಾಮನಮಲಿ, ಹರಪನಹಳ್ಳಿ

## ಅಪರ್ಣಾ ಅಮರ



ನಟಿ, ನಿರೂಪಕಿ ಅಪರ್ಣಾ ಅನೇಕ ಜವಾಬ್ದಾರಿಗಳನ್ನು ನಿಭಾಯಿಸಿರುವುದನ್ನು ಕಂಡಿದ್ದೇವೆ. 58 ಪ್ರಾಯದ ಕನ್ನಡತಿಯ ನಿರ್ಗಮನ ಅಕಾಲಿಕವೆನಿಸದೇ ಇರದು. ಹುಟ್ಟು–ಸಾವು ವಿಧಿಯಾಟ ಎಂಬುದರಲ್ಲಿ ಎರಡು ಮಾತಿಲ್ಲ. ಅಪರ್ಣಾ ಅವರ ಸ್ಪಷ್ಟ ಕನ್ನಡ ಧ್ವನಿ ಅವರನ್ನು ಅಮರಗೊಳಿಸಿದೆ. ಈ ಕ್ಷಣ ಡಿ.ವಿ.ಜಿ. ಅವರ 'ಬದುಕು ಜಟಕಾ ಬಂಡಿ, ವಿಧಿ ಅದರ ಸಾಹೇಬ! ಕುದುರೆ ನೀನ್, ಅವನು ಪೇಳ್ವಂತೆ ಪಯಣಿಗರು; ಮದುವೆಗೋ, ಮಸಣಕೋ...' ನೆನಪಿಗೆ ಬರುತ್ತದೆ.

—ರಾಜೀವ್ ಎನ್. ಮಾಗಲ್, ಸಕಲೇಶಪುರ

## ಶಿಕ್ಷಕಿ ಎಂದರೆ ಕೇವಲವೇ?

ಝೀ ಕನ್ನಡದ 'ಮಹಾನಟಿ' ಕಾರ್ಯಕ್ರಮ ಉತ್ತಮವಾಗಿದೆ. ಆದರೆ, ಅದರಲ್ಲಿನ ನಿರೂಪಕಿಯ ಮಾತು ಕೆಲವು ಬಾರಿ ಅತಿ ಎನಿಸುತ್ತದೆ. ಅದರಲ್ಲೂ ಸ್ಪರ್ಧಿಗಳನ್ನು ಪರಿಚಯಿಸುವಾಗ ಅವರ ಹಿನ್ನೆಲೆಯನ್ನು ಪದೇ ಪದೇ ಒತ್ತಿ ಹೇಳುತ್ತಾರೆ. ಅಲ್ಲಿರುವ ಒಬ್ಬಾಕೆ ಪ್ರೈಮರಿ ಶಾಲಾ ಶಿಕ್ಷಕಿ. ಆಕೆಯ ಪರಿಚಯ ಮಾಡುವಾಗೆಲ್ಲ ಅವರ ಕೆಲಸವನ್ನೇ ಒತ್ತಿ ಒತ್ತಿ ಹೇಳುತ್ತ ಇರುತ್ತಾರೆ. ಅದೇನು ಶಿಕ್ಷಕಿ ಎಂದರೆ ಅಷ್ಟು ಸಣ್ಣ ಭಾವನೆಯೇ. ಇದೇ ರೀತಿ ಉಳಿದವರ ಹಿನ್ನೆಲೆ ಹೇಳುವಾಗಲೂ ನಡೆಯುತ್ತದೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು